ಸಂಖ್ಯೆ: ಸಿಬ್ಬಂದಿ-1/ಬ್ಯಾಂಡ್ಸ್‌ಮೆನ್/ಆರ್.ಪಿ.ಸಿ/ನೇ/18/2021-22

ಕಮಾಂಡೆಂಟರವರ ಕಚೇರಿ
6ನೇ ಪಡೆ ಕೆ.ಎಸ್.ಆರ್.ಪಿ
ತಾಜಸುಲ್ತಾನಪೂರ ಕಲಬುರಗಿ
ದಿನಾಂಕ: 6/09/2021

## 1ನೇ ಭಾಗಶಃ ಅಂತಿಮ ಆಯ್ಕೆ ಪಟ್ಟಿ

ವಿಷಯ:- 2020ನೇ ಸಾಲಿನ ವಿಶೇಶ ಪೋಲೀಸ್ ಕಾನ್ಸ್‌ಟೇಬಲ್ ಬ್ಯಾಂಡ್ಸ್‌ಮೆನ್ ಹುದ್ದೆಯ ಸ್ಥಳೀಯ 14 ಮತ್ತು ಸ್ಥಳೀಯೇತರ 04 ಒಟ್ಟು 18 ಹುದ್ದೆಗಳ ನೇಮಕಾತಿ 1ನೇ ಭಾಗಶಃ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸುವ ಕುರಿತು.

ಉಲ್ಲೇಖ:- 1)ವಿಶೇಷ ಮೀಸಲು ಪೊಲೀಸ್ ಕಾನ್ಸ್‌ಟೇಬಲ್ (ಬ್ಯಾಂಡ್ಸಮೆನ್) ಹುದ್ದೆಗಳ ನೇಮಕಾತಿ ಅಧಿಸೂಚನೆ ಸಂಖ್ಯೆ:15/ನೇಮಕಾತಿ-4/2019-20 ದಿನಾಂಕ 28/03/2020

2)ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ನೇಮಕಾತಿ ಮತ್ತು ಸೇವಾ ಷರತ್ತುಗಳು ) ನಿಯಮಗಳು 2020 ಸರ್ಕಾರಿ ಅಧಿಸೂಚನೆ ಸಂಖ್ಯೆ ಹೆಚ್.ಡಿ/188/ಪೊಸಿಅ/2018 ದಿನಾಂಕ 06/05/2020.

3)ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ನೇಮಕಾತಿ ಬೆಂಗಳೂರು ರವರ ಜ್ಞಾಪನ ಸಂ:15/ನೇಮಕಾತಿ-4/2019-20 ದಿನಾಂಕ 10/05/2021 .

4)ಈ ಕಚೇರಿ ತಾತ್ಕಾಲಿಕ ಆಯ್ಕೆ ಪಟ್ಟಿ ದಿನಾಂಕ 15/05/2021

5)ಈ ಕಚೇರಿ ಪರಿಷ್ಕೃತ ತಾತ್ಕಾಲಿಕ ಆಯ್ಕೆ ಪಟ್ಟಿ ದಿನಾಂಕ 06/07/2021

6) ಈ ಕಚೇರಿ ಭಾಗಶಃ ಅಂತಿಮ ಆಯ್ಕೆ ಪಟ್ಟಿ ದಿನಾಂಕ 01/09/2021

*****

ಕರ್ನಾಟಕ ರಾಜ್ಯ ಮೀಸಲು ಪೊಲೀಸ್ 6ನೇ ಪಡೆ ಕೆ.ಎಸ್.ಆರ್.ಪಿ ಕಲಬುರಗಿ ಘಟಕದಲ್ಲಿ ಖಾಲಿ ಇರುವ 14 ಸ್ಥಳೀಯ ಮತ್ತು 04 ಸ್ಥಳೀಯೇತರ ಒಟ್ಟು 18 ವಿಶೇಷ ಮೀಸಲು ಪೊಲೀಸ್ ಕಾನ್ಸ್‌ಟೇಬಲ್ ಬ್ಯಾಂಡ್ಸ್‌ಮೆನ್ ಹುದ್ದೆಗಳನ್ನು ಭರ್ತಿ ಮಾಡಲು ಉಲ್ಲೇಖ-1ರ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿರುತ್ತದೆ. ಸದರಿ ಅಧಿಸೂಚನೆಯಲ್ಲಿ ನೀಡಲಾಗಿರುವ ನಿಯಮ ಮತ್ತು ಷರತ್ತುಗಳು ಉಲ್ಲೇಖ-2ರ ಸರ್ಕಾರದ ಅಧಿಸೂಚನೆಯನುಸಾರವಾಗಿರುತ್ತದೆ.

ಸರ್ಕಾರದ ಅದಿಸೂಚನೆಯನ್ವಯ ನೇಮಕಾತಿ ಪ್ರಾಧಿಕಾರವು ಲಿಖಿತ ಪರಿಕ್ಷೆಯನ್ನು ದಿನಾಂಕ 22/11/2020 ರಂದು ನಡೆಸಲಾಗಿರುತ್ತದೆ. ಸದರಿ ಲಿಖಿತ ಪರೀಕ್ಷೆಯಲ್ಲಿ 1:5 ರ ಅನುಪಾತದಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ದಿನಾಂಕ 16/02/2021 ಮತ್ತು 17/02/2021 ರಂದು ದೈಹಿಕ ಪರೀಕ್ಷೆ ಮತ್ತು ಸಹಿಷ್ಣುತೆ ಪರೀಕ್ಷೆ ನಡೆಸಲಾಗಿರುತ್ತದೆ. ಸದರಿ ದೈಹಿಕ ಪರೀಕ್ಷೆ ಮತ್ತು ಸಹಿಷ್ಣುತೆ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯಾರ್ಥಿಗಳಿಗೆ ಬ್ಯಾಂಡ್ಸಮೆನ್ ಪ್ರಾಯೋಗಿಕ ಪರೀಕ್ಷೆಯನ್ನು ದಿನಾಂಕ 18/03/2021 ರಿಂದ 22/03/2021 ರವರೆಗೆ ನಡೆಸಲಾಗಿರುತ್ತದೆ.

ಸದರಿ ಪರೀಕ್ಷೆಗಳಲ್ಲಿ ಅರ್ಹರಾದ ಅಭ್ಯರ್ಥಿಗಳಲ್ಲಿ ನೇರ ಮತ್ತು ಸಮತಲ ವರ್ಗಿಕರಣ ಹಾಗೂ ನಿಯಮಗಳನ್ವಯ 1:1 ಅನುಪಾತದಲ್ಲಿ ಉಲ್ಲೇಖಿತ-2ರ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 2020 ರನ್ವಯ ಲಿಖಿತ ಪರೀಕ್ಷೆಯಲ್ಲಿ ಮತ್ತು ಪ್ರಾಯೋಗಿಕ ಪರೀಕ್ಷೆಯಲ್ಲಿ ಪಡೆದ

ಅಂಕಗಳನ್ನು ಒಟ್ಟುಗೂಡಿಸಿದ ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ಸಿದ್ದಪಡಿಸಿ ಉಲ್ಲೇಖ-4 ರಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಮೂಲ ದಾಖಲಾತಿ ಪರಿಶೀಲನೆ ಮತ್ತು ವೈದ್ಯಕೀಯ ಪರೀಕ್ಷೆಗಳನ್ನು ದಿನಾಂಕ 22/06/2021 ಮತ್ತು 23/06/2021 ರಂದು ನಡೆಸಲಾಗಿರುತ್ತದೆ. ಸದರಿ ಆಯ್ಕೆ ಪಟ್ಟಿಯಲ್ಲಿನ 02 ಅಭ್ಯರ್ಥಿಗಳು ಇಚ್ಚೆ ಇರುವುದಿಲ್ಲವೆಂದು ಅರ್ಜಿ ಸಲ್ಲಿಸಿದ್ದು ಉಳಿದ 16 ಅಭ್ಯರ್ಥಿಗಳ ವೈದ್ಯಕೀಯ ಮತ್ತು ದಾಖಲಾತಿ ಪರಿಶೀಲನೆ ಮಾಹಿತಿಯನ್ನು ಈ ಕಚೇರಿಯಿಂದ ವಿವರವಾದ ವರದಿಯನ್ನು ಮಾನ್ಯ ಡಿ.ಐ.ಜಿ.ಪಿ ನೇಮಕಾತಿ ಬೆಂಗಳೂರು ರವರಿಗೆ ಕಳುಹಿಸಲಾಗಿರುತ್ತದೆ. ಸದರಿ ವಿವರಗಳನ್ನು ಪರಿಶೀಲಿಸಿ ನೇಮಕಾತಿ ಕಚೇರಿಯಿಂದ ದಿನಾಂಕ 05/07/2021 ರಂದು ಪರಿಷ್ಕೃತ ಆಯ್ಕೆ ಪಟ್ಟಿಯನ್ನು ತಯಾರಿಸಿ ತಯಾರಿಸಲಾದ ಆಯ್ಕೆ ಪಟ್ಟಿಯನ್ನು ಪರಿಶೀಲಿಸಿ ಸೂಕ್ತಕ್ರಮ ಕೈಗೊಳುವಂತೆ ಸೂಚಿಸಿ ಈ ಕಚೇರಿಗೆ ಕಳುಹಿಸಿರುತ್ತಾರೆ.

ಅದರಂತೆ 02 ಅಭ್ಯರ್ಥಿಗಳ ಆಯ್ಕೆ ಪಟ್ಟಿಯಿಂದ ಕೈಬಿಟ್ಟು ಸದರಿ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದುಗೊಳಿಸಿ. ಅವರುಗಳ ಸ್ಥಾನಕ್ಕೆ ಮೇರಿಟ್ ಪಟ್ಟಿಯಲ್ಲಿನ ನಂತರದ ಅರ್ಹ ಅಭ್ಯರ್ಥಿಗಳನ್ನು ಅಧಿಸೂಚಿತ ವರ್ಗದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅನುಗುಣವಾಗಿ ಉಲ್ಲೇಖ-5ಲ್ಲಿ ಪರಿಷ್ಕೃತ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಒಟ್ಟು 14 ಸ್ಥಳೀಯ ಮತ್ತು 04 ಸ್ಥಳೀಯೇತರ ಒಟ್ಟು 18 ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಿ ಅರ್ಹ ಅಭ್ಯರ್ಥಿಯ ಲಿಖಿತ ಪರೀಕ್ಷೆಯಲ್ಲಿ ಮತ್ತು ಪ್ರಾಯೋಗಿಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಒಟ್ಟುಗೂಡಿಸಿದ ಅಂಕಗಳ ಹಾಗೂ ಜನ್ಮ ದಿನಾಂಕವು ಒಂದೇ ಆಗಿದ್ದಲ್ಲಿ ಅಂತಹ ಸಂದರ್ಭದಲ್ಲಿ ಮಾನ್ಯ ಘನ ನ್ಯಾಯಾಲಯದ ತೀರ್ಪು S.B.CIVIL WRIT PITTION NO:6397/2006 ಅನ್ವಯಿಸುತ್ತದೆ.

THE CRITERIA ADOPTED BY THE COMMISSION ARE AS FOLLOWES

| | |
|---|---|
| 01 | When two or more candidates having secured equal marks then preference is given to the candidate who is more elder in age . |
| 02 | When marks and age is equal then preference is given to the candidate whose academic qualification is higher . |
| 03 | When marks, age and higher academic qualification are same then preference is given to the candidate whose marks are more in senior secondary and graduation course ರಂತೆ ಪಡೆದ ಅಂಕಗಳ ಆಧಾರದ ಮೇಲೆ ಆಯ್ಕೆ ಪರಿಗಣಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ತಯಾರಿಸಿ ಈ ಕೆಳಕಂಡಂತೆ ಹೊರಡಿಸಲಾಗಿರುತ್ತದೆ. |
| ಅ | ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳು ನೇಮಕಾತಿಗೆ ಯಾವುದೇ ಹಕ್ಕು ಹೊಂದಿರುವುದಿಲ್ಲ. |
| ಆ | ಈ ತಾತ್ಕಾಲಿಕ ಆಯ್ಕೆ ಪಟ್ಟಿಯು ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ಹಾಗೂ ಆಯ್ಕೆ ಸಮಿತಿಯು ನೇಮಿಸುವ ವೈದ್ಯಕೀಯ ಮಂಡಳಿಯು ವೈದ್ಯಕೀಯ ಪರಿಕ್ಷೆಯನ್ನು ನಡೆಸಿ ಸಲ್ಲಿಸುವ ವೈದ್ಯಕೀಯ ಪರೀಕ್ಷೆಯ ಫಲಿತಾಂಶಗಳಿಗೆ ಒಳಪಟ್ಟಿರುತ್ತದೆ. |
| ಇ | ಮೇಲೆ ತಿಳಿಸಲಾಗಿರುವ ನಿಯಮಗಳನ್ನು ಪೂರ್ಣಗೊಳಿಸದ ಹೊರತು ಯಾವುದೇ ಅಭ್ಯರ್ಥಿಯು ನೇಮಕಾತಿ ಹೊಂದಲು ಕಾನೂನು ರೀತ್ಯಾ ಹಕ್ಕು ಹೊಂದಿರುವುದಿಲ್ಲ. |
| ಈ | ಯಾವುದೇ ವೇಳೆ ಈ ತಾತ್ಕಾಲಿಕ ಆಯ್ಕೆ ಪಟ್ಟಿಯು ಘನ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ/ ಮಾನ್ಯ ನ್ಯಾಯಾಲಯದ ಅಂತಿಮ ನಿರ್ದೇಶನ ಒಳಪಟ್ಟಿರುತ್ತದೆ. |

**Partial final selection list for the post of special Reserve Police Constable Bandsmen 6th BN KSRP Kalaburagi (KK- ಸ್ಥಳೀಯ)**

| SlNo | ApplNo | RollNo | Name | Written Marks | Pratical Marks | Total Mark | Selection Category | Remarks |
|---|---|---|---|---|---|---|---|---|
| 1 | 2026161 | 3400956 | MOUNESH | 36.5 | 20 | 56.5 | KK_2A_OTH_1 | - |

(ಶ್ರೀ ಬಸವರಾಜ ಜಿಳ್ಳೆ, ಕೆ.ಎಸ್.ಪಿ.ಎಸ್)
ಅಧ್ಯಕ್ಷರು
ಸ್ಪೆ.ಆರ್.ಪಿ.ಸಿ ಬ್ಯಾಂಡ್ಸ್‌ಮೆನ್ ಸೆಲೆಕ್ಷನ್ ಅಥಾರಿಟಿ ಮತ್ತು
ಕಮಾಂಡೆಂಟ್
6ನೇ ಪಡೆ ಕೆ.ಎಸ್.ಆರ್.ಪಿ ಕಲಬುರಗಿ